

# ಮಕ್ಕಳ ಮೈಮೇಲೆ ದದ್ದು

## ಇದೆ ಮನೆಮದ್ದು

ನವಜಾತ ಶಿಶುಗಳು ಮತ್ತು ಪುಟ್ಟ ಮಕ್ಕಳಲ್ಲಿ ಚರ್ಮದ ಸಮಸ್ಯೆಗಳು ಸಾಮಾನ್ಯ. ಮಕ್ಕಳ ನಾಜೂಕಾದ ಚರ್ಮಕ್ಕೆ ಸ್ವಚ್ಛತೆ, ತೇವಾಂಶದ ಸಮತೋಲನ ಮತ್ತು ಮೃದುವಾದ ಆರೈಕೆ ಅತ್ಯಂತ ಅಗತ್ಯ. ಸರಿಯಾದ ಆರೈಕೆಯಿಂದ ಈ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದು.





■ ಡಾ. ವಸುಂಧರಾ ಭೂಪತಿ

ನವಜಾತ ಶಿಶುಗಳ ಆರೋಗ್ಯ ಅತ್ಯಂತ ಸೂಕ್ಷ್ಮ. ಇದು ಶಿಶುವಿನ ಜೀವನದ ಮಹತ್ವದ ಹಂತವೂ ಹೌದು. ತಾಯಿಯ ಗರ್ಭದ ಸುರಕ್ಷಿತ ಪರಿಸರದಿಂದ ಹೊರಬಂದು ಹೊಸ ಜಗತ್ತಿಗೆ ಹೊಂದಿಕೊಳ್ಳುವ ಸಮಯ ಇದು. ಈ ಹಂತದಲ್ಲಿ ಶಿಶುವಿನ ದೇಹದ ಅಂಗಾಂಗಗಳು ಸಂಪೂರ್ಣವಾಗಿ ಬೆಳೆದಿರುವುದಿಲ್ಲ ಮತ್ತು ರೋಗನಿರೋಧಕ ಶಕ್ತಿಯೂ ಕಡಿಮೆಯಿರುತ್ತದೆ. ಆದ್ದರಿಂದ ನವಜಾತ ಶಿಶುಗಳಲ್ಲಿ ಕೆಲ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಹಜ. ಈ ಸಮಯಕ್ಕೆ ಸರಿಯಾದ ಗಮನ, ಆರೈಕೆ ಮತ್ತು ಚಿಕಿತ್ಸೆ ನೀಡಿದರೆ ಹೆಚ್ಚಿನ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದು.

ನವಜಾತ ಶಿಶುಗಳು ಮತ್ತು ಎಂಟು ವರ್ಷದೊಳಗಿನ ಮಕ್ಕಳಲ್ಲಿ ಚರ್ಮದ ಅಲರ್ಜಿಗಳು ಮತ್ತು ಚರ್ಮದ ಸಮಸ್ಯೆಗಳು ಸಾಮಾನ್ಯವಾಗಿವೆ. ಏಕೆಂದರೆ ಅವರ ಚರ್ಮವು ತೆಳ್ಳಗಿರುತ್ತದೆ ಮತ್ತು ಸೂಕ್ಷ್ಮವಾಗಿರುತ್ತದೆ. ಶಾಖ, ಬೆವರು, ದೂಳು, ಆಹಾರ ಸೇವನೆಯ ಪರಿಣಾಮಗಳು, ಸೊಳ್ಳೆ, ಕೀಟಗಳ ಕಡಿತ, ಸೋಂಕುಗಳು ಮತ್ತು ಸ್ನಾನ ಮಾಡಿಸಲು ರಾಸಾಯನಿಕ ಸೋಪುಗಳು ಅಥವಾ ಮಾರ್ಜಕಗಳ ಬಳಕೆಯು ಈ ಸಮಸ್ಯೆಗಳನ್ನು ಹೆಚ್ಚಾಗಿ ಪ್ರಚೋದಿಸುತ್ತದೆ. ಚರ್ಮದ ಸಮಸ್ಯೆಗಳು ನವಜಾತ ಶಿಶುಗಳಲ್ಲಿ ಸಾಮಾನ್ಯ. ಡೈಪರ್ ರ್‍ಯಾಶ್, ಬೆವರಿನ ಗುಳ್ಳೆಗಳು ಮತ್ತು ಸಣ್ಣ ದದ್ದುಗಳು ಚರ್ಮದ ಮೇಲೆ ಕಂಡುಬರುತ್ತವೆ. ಈ ಮಕ್ಕಳ ಚರ್ಮ ಅತಿಸೂಕ್ಷ್ಮವಾಗಿರುವುದರಿಂದ ಸ್ವಚ್ಛತೆ ಕಾಪಾಡುವುದು ಬಹಳ ಮುಖ್ಯ.

ಮಗುವಿಗೆ ಹಾಕುವ ಬಟ್ಟೆಗಳು ಸ್ವಚ್ಛವಾಗಿರಬೇಕು. ಹತ್ತಿ ಬಟ್ಟೆಗಳನ್ನು ಆಯ್ಕೆ ಮಾಡಿ. ಈ ಬಟ್ಟೆಗಳನ್ನು ಪ್ರಬಲ ಸೋಪು/ ಡಿಟರ್ಜೆಂಟುಗಳಿಂದ